# ಏಷ್ಯಾದ ಕುಬೇರ



■ ಪ್ರವೀಣ ಕುಲಕರ್ಣಿ

ಕಳೆದ ವಾರ ಎಲ್ಲೆಡೆ ಕುಬೇರರದೇ ಸುದ್ದಿ. ಒಂದೆಡೆ ಏಷ್ಯಾದ ಸಿರಿವಂತರ ಪಟ್ಟಿ ಹೊರಬಿದ್ದರೆ, ಇನ್ನೊಂದೆಡೆ ಭ್ರಷ್ಟ ಅಧಿಕಾರಿಗಳ ಮನೆಯಿಂದ ಕಾಂಚಾಣ–ಕಾಸಿನ ಸರಗಳೆಲ್ಲ ಹೊರಬಿದ್ದು ಸುದ್ದಿಯಾಯಿತು. ಭ್ರಷ್ಟಾಚಾರ ನಿಗ್ರಹ ದಳದಿಂದ ದಾಳಿಗೊಳಗಾದ ರಾಜ್ಯದ ಕುಬೇರರು ಕೈ–ಕೈ ಹಿಸುಕಿಕೊಂಡರೆ, ಏಷ್ಯಾದ ಸಿರಿವಂತರ ಪಟ್ಟಿಯಲ್ಲಿ ಕಾಣಿಸಿಕೊಂಡ ದೇಶದ ಕುಬೇರರು ಸಂಭ್ರಮಿಸಿದರು. ಹಾಗೆ ಸಂಭ್ರಮಿಸಿದವರಲ್ಲಿ ಗೌತಮ್ ಅದಾನಿ ಅವರದು ಎದ್ದು ಕಾಣುವ ಹೆಸರು. ಏಕೆಂದರೆ, ಅವರೀಗ ಏಷ್ಯಾದ ನಂಬರ್ ಒನ್ ಶ್ರೀಮಂತ!

ಅದಾನಿ ಅವರ ಕುರಿತು ಮೊದಲೇ ಒಂದೆರಡು ವಿಷಯಗಳನ್ನು ಹೇಳಿಬಿಡುವುದು ಒಳಿತು. ನಿಮಗೆ ಗೊತ್ತೆ? ಅವರೊಬ್ಬ ಕಾಲೇಜು ಡ್ರಾಪೌಟ್. ದೇಶದ ವಾಣಿಜ್ಯ ರಾಜಧಾನಿ ಮುಂಬೈನಲ್ಲಿ ನಡೆದ (2008) ಭಯೋತ್ಪಾದಕರ ದಾಳಿಯಲ್ಲಿ ಸಾವಿನಿಂದ ಕೂದಲೆಳೆಯ ಅಂತರದಿಂದ ಬಚಾವ್ ಆದ ವ್ಯಕ್ತಿಯೂ ಹೌದು. 'ನಾನೊಮ್ಮೆ ಕಿಡ್ನ್ಯಾಪ್ ಆಗಿದ್ದೆ' ಎಂದು ಸ್ವತಃ ಗೌತಮ್ ಹೇಳಿಕೊಂಡಿದ್ದಿದೆ.

ರಾಜಕೀಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೈತ್ಯಾಕಾರವಾಗಿ ಬೆಳೆದಂತೆಯೇ ಗುಜರಾತ್‌ನ ಈ ಬಂದರು ಉದ್ಯಮಿ, ಕೈಗಾರಿಕಾ ರಂಗದಲ್ಲಿ ಬಲು ಕ್ಷಿಪ್ರವಾಗಿ ಬೆಳೆದವರು. ಅವರ ಆಸ್ತಿಯ ಒಟ್ಟು ಮೌಲ್ಯ 66.54 ಲಕ್ಷ ಕೋಟಿ. ಪ್ರಸಕ್ತ ವರ್ಷದಲ್ಲೇ ಅವರ ವರಮಾನ 1800 ಪಟ್ಟು ಹೆಚ್ಚಾಗಿದೆಯಂತೆ! ಅದಾನಿ ಅವರೀಗ ಮುಕೇಶ್ ಅಂಬಾನಿ ಅವರಿಗಿಂತ 60 ಸಾವಿರ ಕೋಟಿಯಷ್ಟು ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದ ಸಿರಿವಂತ.

ಅದಾನಿ ಅವರ ಉದ್ಯಮದ ಆಸಕ್ತಿಗಳು ಹಲವು. ಇಂಧನ, ರಕ್ಷಣೆ, ರಿಯಲ್ ಎಸ್ಟೇಟ್, ಬಂದರು, ಗಣಿಗಾರಿಕೆ ಹೀಗೆ ವಿವಿಧ ಕಡೆಗಳಲ್ಲಿ ಅವರು ಹೂಡಿಕೆ ಮಾಡಿದ್ದಾರೆ. ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಶೇ. 74ರಷ್ಟು ಬಂಡವಾಳ ಹೂಡಿದ್ದಾರೆ.

ಅಹ್ಮದಾಬಾದ್‌ನ ಜವಳಿ ಉದ್ಯಮಿಯ ಎಂಟು ಜನ ಪುತ್ರರಲ್ಲಿ ಗೌತಮ್ ಕೂಡ ಒಬ್ಬರು. ತಂದೆಯ ಉದ್ಯಮವನ್ನು ಮುನ್ನಡೆಸಲು ಅಷ್ಟಾಗಿ ಆಸಕ್ತಿ ಇಲ್ಲದಿದ್ದ ಅವರು, ಗುಜರಾತ್ ವಿಶ್ವವಿದ್ಯಾಲಯದಲ್ಲಿ ವಾಣಿಜ್ಯ ಪದವಿ ಓದಲು ಸೇರಿಕೊಂಡಿದ್ದರು. ಆದರೆ, ಪದವಿಯನ್ನು ಪೂರೈಸದೆ ಎರಡನೇ ವರ್ಷದಲ್ಲಿ ಕಾಲೇಜಿನಿಂದ ಹೊರಬಿದ್ದರು. ಮುಂಬೈನಲ್ಲಿ ವಜ್ರದ ವಹಿವಾಟು ನಡೆಸುತ್ತಿದ್ದ ಮಳಿಗೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಕೆಲ ದಿನಗಳಲ್ಲಿ ಅದಾನಿ ಎಂಟರ್‌ಪ್ರೈಸಸ್ ಎಂಬ ತಮ್ಮದೇ ಕಂಪನಿ ತೆರೆದ ಅವರು, ವಜ್ರದ ವ್ಯಾಪಾರಕ್ಕೆ ಧುಮುಕಿದರು. ಮುಂದೆ ಬಂದರು ನಿರ್ಮಾಣ ಕ್ಷೇತ್ರದ ಕಡೆಗೆ ಹೊರಳಿದರು. 1995ರಲ್ಲಿ ಆಗಿನ ಗುಜರಾತ್ ಸರ್ಕಾರ ಮುಂದ್ರ ಎಂಬಲ್ಲಿ ಖಾಸಗಿ ಬಂದರು ನಿರ್ಮಿಸಿಕೊಳ್ಳಲು ಅದಾನಿ ಅವರಿಗೆ ಅನುಮತಿ ನೀಡಿತು. ಮುಂದ್ರದಲ್ಲಿ ಅದಾನಿ ಅವರ ಕಂಪನಿ ಅಭಿವೃದ್ಧಿಪಡಿಸಿದ ಬಂದರು, ಜಗತ್ತಿನ ಅತಿದೊಡ್ಡ ಖಾಸಗಿ ಬಂದರು ಎಂದು ಖ್ಯಾತವಾಗಿದೆ.

ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ 2003ರಲ್ಲಿ ಅಧಿಕಾರ ವಹಿಸಿಕೊಂಡ ದಿನದಿಂದಲೂ ಅವರಿಗೆ ಹತ್ತಿರವಾಗಿರುವ ಅದಾನಿ, ಅವರನ್ನು ರಾಜಕೀಯವಾಗಿ ಬೆಂಬಲಿಸುತ್ತಲೇ ಉದ್ಯಮದಲ್ಲಿ ಊಹೆಗೂ ನಿಲುಕದಷ್ಟು ಎತ್ತರಕ್ಕೆ ಬೆಳೆದರು ಎಂಬುದು ಗುಜರಾತ್‌ನ ತುಂಬಾ ಕೇಳಿಬರುವ ಮಾತು. ಮೋದಿ ಅವರ ಸರ್ಕಾರ ಅವರ ಉದ್ಯಮಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನೂ ಒದಗಿಸಿಕೊಟ್ಟಿತು ಎಂಬ ಸಂಗತಿ ಕೂಡ ಬಹುವಾಗಿ ಚರ್ಚಿತವಾಗಿದೆ. ಆದರೆ, 'ನನ್ನ ಉದ್ಯಮದ ಯಶಸ್ಸಿಗೂ ರಾಜಕೀಯ ನಂಟಿಗೂ ಸಂಬಂಧವಿಲ್ಲ' ಎಂದು ಸಂದರ್ಶನವೊಂದರಲ್ಲಿ ಅದಾನಿ ಪ್ರತಿಪಾದಿಸಿದ್ದರು.

1998ರಲ್ಲಿ ಒಂದುದಿನ ಅದಾನಿಯವರು ಒಡನಾಡಿ ಶಾಂತಿಲಾಲ್ ಪಟೇಲ್ ಎಂಬುವರ ಜತೆ ಪ್ರಯಾಣ ಮಾಡುತ್ತಿದ್ದಾಗ ದುಷ್ಕರ್ಮಿಗಳ ತಂಡ ಅವರನ್ನು ಅಡ್ಡಗಟ್ಟಿ ಅಪಹರಿಸಿತ್ತು. ಆಗ ಅದಾನಿ ಅವರ ಕುಟುಂಬ 15 ಕೋಟಿ ರೂಪಾಯಿ ಕೊಟ್ಟು ಅವರನ್ನು ಬಿಡಿಸಿಕೊಂಡು ಬಂದಿತ್ತು ಎಂದು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿತ್ತು. ಅಪಹರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಅವರನ್ನು 2018ರಲ್ಲಿ ಕೋರ್ಟ್ ಆರೋಪಮುಕ್ತಗೊಳಿಸಿತ್ತು. ಘಟನೆಯ ವಿವರವನ್ನು ಅದಾನಿಯವರಿಂದಲೇ ಪಡೆಯಲು ಪತ್ರಕರ್ತರು ಪ್ರಯತ್ನಿಸಿದ್ದುಂಟು. 'ನನ್ನ ಜೀವನದಲ್ಲಿ 2–3 ಅಹಿತಕರ ಘಟನೆಗಳು ನಡೆದಿವೆ. ಅವುಗಳಲ್ಲಿ ಇದೂ ಒಂದು. ಹೆಚ್ಚೇನೂ ಹೇಳಲಾರೆ' ಎಂದು ನುಣುಚಿಕೊಂಡಿದ್ದರು.

2008ರಲ್ಲಿ ಮುಂಬೈನಲ್ಲಿ ಭಯೋತ್ಪಾದಕರ ದಾಳಿ ನಡೆದಾಗ ಅದಾನಿ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದರು. ಅದಾನಿ ಊಟಕ್ಕೆ ತೆರಳಿದ್ದ ತಾಜ್ ಹೋಟೆಲ್ ಕೂಡ ಭಯೋತ್ಪಾದಕರ ದಾಳಿಗೆ ತುತ್ತಾಗಿತ್ತು. ಬಂದೂಕುಧಾರಿ ಭಯೋತ್ಪಾದಕರು ಹೋಟೆಲ್ ಒಳಗೆ ನುಗ್ಗುತ್ತಿರುವುದನ್ನು ಕಂಡ ಅದಾನಿ, ಬೇಸ್‌ಮೆಂಟ್‌ನಲ್ಲಿ ಅಡಗಿಕೊಂಡು ಜೀವ ಉಳಿಸಿಕೊಂಡಿದ್ದರು. 'ಜನ ಜೀವ ಕಳೆದುಕೊಂಡು ಇಸ್ಪೀಟ್ ಎಲೆಗಳಂತೆ ಉದುರುವುದನ್ನು ಕೇವಲ 15 ಅಡಿಗಳ ಅಂತರದಿಂದ ಕಂಡೆ. ಮರುದಿನ ಕಮಾಂಡೊಗಳು ಬಂದು ನಮ್ಮ ಜೀವ ಉಳಿಸಿದರು. ಅಲ್ಲಿಯವರೆಗೆ ದೇವರನ್ನು ನೆನೆಯುವುದು ಬಿಟ್ಟು ನಮ್ಮ ಮುಂದೆ ಬೇರೆ ಆಯ್ಕೆ ಇರಲಿಲ್ಲ' ಎಂದು ಅದಾನಿ ಹೇಳಿದ್ದರು. ಅಂತಹ ಗಂಡಾಂತರಗಳನ್ನೆಲ್ಲ ಪಾರಾಗಿ ಬಂದಿರುವ ಅದಾನಿ, ಅಲ್ಪ ಅವಧಿಯಲ್ಲಿ ಏರಿದ ಎತ್ತರ ಬೆರಗು ಉಂಟು ಮಾಡುತ್ತದೆ.

ಮೋದಿ ಅವರ ಸಖ್ಯದ ಕಾರಣಕ್ಕೆ ರಾಜಕೀಯವಾಗಿ ಅತ್ಯಂತ ಪ್ರಭಾವಿಯಾಗಿರುವ ಅದಾನಿ, ಬಯಸಿದ್ದನ್ನು ಪಡೆಯಬಲ್ಲರು ಎಂಬ ಮಾತು ಉದ್ಯಮ ವಲಯದಲ್ಲಿ ಜನಜನಿತವಾಗಿದೆ. ಸಿರಿವಂತ ಸಿಂಹಾಸನ ಏರಲು ದೇಶವನ್ನೇ ಏಣಿ ಮಾಡಿಕೊಂಡ ಈ ಕುಬೇರನಿಗೆ ದೇಶದ ಕುಚೇಲರ ನೋವು ಮಾತ್ರ ಕಾಣಿಸದು ಎನ್ನುವ ಟೀಕೆ ಅವರ ಕಿವಿಗೆ ಬೀಳದಷ್ಟು ಅವರ ಉದ್ಯಮದ ಯಶಸ್ಸಿನ ಸಂಭ್ರಮವೀಗ ಬಾನೆತ್ತರಕ್ಕೆ ಮುಟ್ಟಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65